# ವ್ಯಾಪಾರ ನಮಗಾಯಿತು ಶ್ರೀಪತಿ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 145.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 525.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 111.
4. **Note:** Lyrics as per Ref. 1 are mentioned without highlights. The wordings as per Ref. 2 are given in yellow highlights. The wordings of Ref. 3 are similar to Ref. 2.
5. **Note:** The singer has followed the wordings in Ref. 2.

ರಾಗ ಪಂತುವರಾಳಿ ತಾಳ ಅಟ

| | |
|---|---|
| ವ್ಯಾಪಾರ ನಮಗಾಯಿತು | ವ್ಯಾಪಾರ ವೆನಗಾಯಿತು |
| ಶ್ರೀಪತಿ ಪಾದಾರವಿಂದ ಸೇವೆಯೆಂಬೊ ‖ ಪ ‖ | ಶ್ರೀಪತಿ ಪಾದಾರವಿಂದ ಸೇವೆಯೆಂಬ |
| | |
| ಹರಿ ಕರುಣವೆ ಅಂಗಿ ಗುರು ಕರುಣ ಮುಂಡಾಸು | ಹರಿ ಕರುಣವೆಂಬಂಗಿ ಗುರು ಕರುಣ ಮುಂಡಾಸು |
| ಹರಿದಾಸರ ದಯವೆಂಬೊ ವಲ್ಲಿ | ಹರಿದಾಸರ ದಯವೆಂಬ ವಲ್ಲಿ |
| ಪರಮ ಪಾಪಿ ಕಲಿ ಎಂಬೊ ಪಾಪಾಸು ಮೆಟ್ಟಿ | ಪರಮ ಪಾಪಗಳೆಂಬ ಪಾಪೋಸವನೆ ಮೆಟ್ಟಿ |
| ದುರಾತ್ಮರಾದವರ ಎದೆ ಮೇಲೆ ನಡೆವಂಥ ‖ ೧ ‖ | ದುರಾತ್ಮರಾದವರ ಎದೆ ಮೇಲೆ ನಡೆವಂಥ |
| | |
| ಬಿಳಿಯ ಕಾಗದ ಹೃದಯ ಬಾಯಿ ಕಲಮದಾನಿ | ಬಿಳಿಯ ಕಾಗದ ಹೃದಯ ಬಾಯಿ ಕಲಮದಾನಿ |
| ನಾಲಿಗೆ ಎಂಬೋದು ಲೇಖಣಿಯು | ನಾಲಿಗೆ ಎಂಬ ಲೇಖಣಿಕೆ |
| ಶ್ರೀಲೋಲನ ಕಥೆ ದಿವ್ಯ ನಾಮಂಗಳ | ಶ್ರೀಲೋಲನ ದಿವ್ಯ ನಾಮವೆಂಬುವ ಲೆಕ್ಕ |
| ಶೀಲ ಮನವಿ ಬರೆದು ಹರಿಗೆ ಒಪ್ಪಿಸುವಂಥ ‖ ೨ ‖ | ಶೀಲದಿ ಬರೆದು ಶ್ರೀ ಹರಿಗೆ ಒಪ್ಪಿಸುವಂಥ |
| | |
| ಮುಂದಣ ಆಗಮ ಸಂಸಾರದ ಬಾಧೆ | ನುಡಿ ನುಡಿಗಾನಂದ ಬಾಷ್ಪ ರೋಮಾಂಚನ |
| ಎಂದೆಂದಿಗು ಅದರ ಭಯ ಬಿಟ್ಟಿತು | ಮುಡುಪಿನೊಳಗೆ ಇಟ್ಟ ಕೈ ಜೀತವು |
| ಹಿಂದಣ ಸಂಚಿತ ಸಾಲ ಭಾರಕ್ಕೆಲ್ಲ | ಕಡಮೆ ಸಂಬಳಕೆಲ್ಲ ಮುಕುತಿ ಸಾಧನವನ್ನು |
| ಸಂದಾಯವನು ಮಾಡಿ ಕತಬಿ ಹರಿಸಿ ಬಿಟ್ಟ ‖ ೩ ‖ | ಕೊಡುವ ತೆರನಂತೆ ಚೀಟಿ ಬರೆಸಿಕೊಟ್ಟ |
| | |
| ನುಡಿ ನುಡಿಗಾನಂದ ಬಾಷ್ಪ ರೋಮಾಂಚನ | ಹಿಂದಿನ ಸಂಸಾರ ಆಗಮನದ ಭಯ |
| ಮುಡುಪಿನೊಳಗೆ ಇಟ್ಟ ಕೈ ಜೀತವು | ಎಂದೆಂದಿಗದರ ಚಿಂತೆಯು ಬಿಟ್ಟಿತು |

| | |
|---|---|
| ಕಡೆಯ ಸಂಬಳಕೆಲ್ಲ ಮುಕುತಿ ಸಾಧನವನ್ನು | ಮುಂದಿನ ಸಂಸಾರ ಸ್ವಾನಭಾರಕೆಲ್ಲ |
| ಕೊಡುವಂತೆ ತಿರುಗದ ಚೀಟಿ ಬರೆಸಿಕೊಟ್ಟ || ೪ || | ಸಂದಾಯವನು ಮಾಡಿ ಕತಬಿ ಹರಿಸಿ ಕೊಟ್ಟ |

| | |
|---|---|
| ಕಂಡ ಕಂಡವರಿಗೆ ಕಾರ್ಪಣ್ಯವ ಪಟ್ಟು | ಕಂಡ ಕಂಡವರ ಕಾಲುಗಳಿಗೆರಗಿ ನನ್ನ |
| ಮಂಡೆ ಅಡ್ಡಾಗಿ ನಾ ಬಳಲಲಿಲ್ಲ | ಮಂಡೆ ದಡ್ಡುಗಟ್ಟಿ ಬಳಲಿದೆನೊ |
| ಪುಂಡರೀಕಾಕ್ಷ ಶ್ರೀ ಪುರಂದರ ವಿಠಲನು | ಪುಂಡರೀಕಾಕ್ಷ ಶ್ರೀ ಪುರಂದರ ವಿಠಲನು |
| ದಂಡಿಸಿ ವೀಳ್ಯವ ಕೊಟ್ಟು ಸೇವೆಯೊಳಿಟ್ಟ || ೫ || | ಕಂಡು ವೀಳೆಯ ಕೊಟ್ಟು ತನ್ನ ಸೇವೆಗೆ ಇಟ್ಟ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಹರಿದಾಸರಾಗುವ ಮುನ್ನ ಪುರಂದರ ದಾಸರು ಲೌಕಿಕ ವೃತ್ತಿಯನ್ನೇ ಹಿಡಿದಿದ್ದರೆಂದು ಪ್ರತೀತಿ. ಪಟ್ಟಣವೊಂದರಲ್ಲಿ ಸಾಹುಕಾರರಾಗಿ ಬಡ್ಡಿ ಬಾಚಿ ಕೊಡಕೊಳ್ಳುವ ವ್ಯಾಪಾರ ಮಾಡುತ್ತಿದ್ದರಂತೆ. ಹರಿದಾಸರಾದ ಮೇಲೆ ತಮ್ಮಲ್ಲಿದ್ದ ಹಣವನ್ನೆಲ್ಲ ಕೃಷ್ಣಾರ್ಪಣವೆಂದು ದಾನಮಾಡಿ 'ಮಧುಕರ' ವೃತ್ತಿಯನ್ನು ಹಿಡಿದರು; ಇನ್ನಾವ ಲೌಕಿಕ ವೃತ್ತಿಯನ್ನೂ ಹಿಡಿಯುವ ಹಾಗಿರಲಿಲ್ಲ. ಈ ಹಾಡಿನಲ್ಲಿ ತಮ್ಮ ಈಗಿನ ಮಧುಕರವೃತ್ತಿಯೂ ಹಿಂದಣ ವ್ಯಾಪಾರದಂತೆಯೇ ಇದೆ, ಆದರೆ ವಿವರಗಳು, ಪರಿಕರಗಳು ಬೇರೆ ಎಂದು ಸೂಚಿಸಿದ್ದಾರೆ. ಲೌಕಿಕ ವ್ಯಾಪಾರ ವಹಿವಾಟಿನ ಪರಿಭಾಷೆಯನ್ನೇ ಬಳಸಿ ಯಜಮಾನ ಮತ್ತು ಕೆಲಸಗಾರ ಇವರ ನಡುವಣ ಸಂಬಂಧವನ್ನು ಇಲ್ಲಿ ವಿವರಿಸಲಾಗಿದೆ. ಸ್ವಾಮಿಯ ಭದ್ರ ಆಶ್ರಯದಲ್ಲಿ ತನ್ನ ಕ್ಷೇಮ ಅಡಗಿದೆ ಎಂಬ ಪ್ರಪತ್ತಿ ಭಾವ ಇಲ್ಲಿ ಬಿಂಬಿತವಾಗಿದೆ. ತಮ್ಮ ಕಾಲದಲ್ಲಿ ವ್ಯಾವಹಾರಿಕವಾಗಿ ಬಳಕೆಯಲ್ಲಿದ್ದ ಪರ್ಷಿಯನ್-ಅರಾಬಿಕ್ ಶಬ್ದಗಳನ್ನು ಪುರಂದರ ದಾಸರು ಇಲ್ಲಿ ಸುಸೂತ್ರವಾಗಿ ಬಳಸಿದ್ದಾರೆ.

**ಮುಂಡಾಸು** – ತಲೆಗೆ ಸುತ್ತುವ ಬಟ್ಟೆ ಅಥವಾ ತಲೆಯ ಮೇಲಿರಿಸಿಕೊಳ್ಳುವ ಟೊಪ್ಪಿಗೆ.

**ವಲ್ಲಿ** = ಉತ್ತರೀಯ, ಶಲ್ಯ

**ಪಾಪೋಸು – ಪಾಪಾಸು** – ಕಾಲಿಗೆ ತೊಡುವ ಮೆಟ್ಟು, ಕಾಲ್ಮರೆ

**ಕಲಮದಾನಿ** – ಬರೆಯುವ ಸಾಧನವಾದ ಲೆಕ್ಕಣಿಕೆಯನ್ನು (ಕಲಮು) ಇರಿಸುವ ಸಂಚಿ ಅಥವಾ ಪಾತ್ರೆ (ದಾನಿ).

**ಕತಬಿ** – ಸಾಲದ ಪತ್ರ.

**ಮುಡುಪಿಯೊಳಗೆ** – ಮುಡುಪು, ಹಣವನ್ನಿರಿಸಿಕೊಳ್ಳುವ ಚೀಲ, ಸಂಚಿ.

**ಕೈಜೀತ** – ಪಡೆದುಕೊಂಡ ಸಂಬಳ.

**ತಿರುಗದ ಚೀಟಿ** – ಎಂದಿಗೂ ತಿರಸ್ಕೃತವಾಗದ ವಾಗ್ದಾನ ಪತ್ರ.

**ಕಾರ್ಪಣ್ಯ** – ನಾಚಿಕೆ.

**ಹಿಂದಿನ ಸಂಸಾರ** = ಸಂಚಿತ ಕರ್ಮ

**ಮಂಡೆ ಅಡ್ಡಾಗಿ** – ತಲೆ ತಗ್ಗಿಸಿ.

**ದಂಡಿಸಿ** – ಕಾಲಿಗೆ ಎರಗಿಸಿಕೊಂಡು

**ವೀಳ್ಯವ ಕೊಟ್ಟು** – 'ವೀಳೆಯಂ ಕೊಡು' ಎಂಬ ಪ್ರಯೋಗವು ಸಾಂಪ್ರದಾಯಿಕವಾಗಿ ಬರಮಾಡಿಕೊಳ್ಳುವುದು, ಮಾತು ಕೊಡುವುದು, ನೇಮಿಸಿಕೊಳ್ಳುವುದು ಎಂಬರ್ಥದಲ್ಲಿ ಬರುತ್ತದೆ; ಸಂಚಗಾರ ಕೊಡು

**Classification:** Keerthane
**Ankita:** Sri Purandara Vittala
**Location:** NA
**Category:** Krishna Stuti, Bhakti, Aartha Bhava,
**Sub-Category:** sripati, vyapara, agni, Krishna, daya, paposu, papa, nalige, bayi, kagada, karma, sambala, mukti, samsara, chinte, kai, mana, bhaya,
**Pravachana:** NA
**Explanation:** NA